**ಭಾರತ ಸರ್ಕಾರ**
**ಹಣಕಾಸು ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**
**ಆರ್ಥಿಕ ವ್ಯವಹಾರಗಳ ಇಲಾಖೆ.**

**ಅಧಿಸೂಚನೆ**

ನವದೆಹಲಿ, ದಿನಾಂಕ 2ನೇ ಏಪ್ರಿಲ್ 2003

**ಶೇ 8ರ ಉಳಿತಾಯ (ತೆರಿಗೆಗೆ ಒಳಪಡುವ)ಬಾಂಡುಗಳು, 2003**

ಎಫ್ ಸಂಖ್ಯೆ 4(10)–ಡಬ್ಲ್ಯೂ ಮತ್ತು ಎಂ/2003: ಭಾರತ ಸರ್ಕಾರವು ಈ ಮಂತ್ರಾಲಯದ ಅಧಿಸೂಚನೆ ಸಂಖ್ಯೆ ಎಫ್ 4(10)–ಡಬ್ಲ್ಯೂ ಮತ್ತು ಎಂ/2003, ದಿನಾಂಕ 21ನೇ ಮಾರ್ಚ್ 2003ರ ಪ್ಯಾರಾ 13ನ್ನು ಭಾಗಶಃ ಮಾರ್ಪಾಡು ಮಾಡಿ ಈ ಮುಂದಿನಂತೆ ಪ್ರತಿಸ್ಥಾಪಿಸಲಾಗಿದೆ ಎಂದು ಈ ಮೂಲಕ ಅಧಿಸೂಚಿಸುತ್ತದೆ.

**ಪ್ಯಾರಾ 13–        ಬಡ್ಡಿ**

ಬಾಂಡುಗಳಿಗೆ ವರ್ಷಕ್ಕೆ ಶೇ.8ರ ದರದಲ್ಲಿ ಬಡ್ಡಿ ದೊರೆಯುತ್ತದೆ. ಸಂಚಿತವಲ್ಲದ ಬಾಂಡುಗಳ ಮೇಲಿನ ಬಡ್ಡಿಯನ್ನು ಮೇಲಿನ ಪ್ಯಾರಾ 7ರ ಅನ್ವಯ ನೀಡಿದ ದಿನಾಂಕದಿಂದ ಅರ್ಧ ವಾರ್ಷಿಕ ಅಂತರಗಳಲ್ಲಿ ಸಂದಾಯ ಮಾಡಲಾಗುವುದು. ಸಂಚಿತ ಬಾಂಡುಗಳ ಮೇಲಿನ ಬಡ್ಡಿಯನ್ನು ವಂತಿಗೆದಾರನ ಆಯ್ಕೆಯಂತೆ ಅರ್ಧವಾರ್ಷಿಕ ಬಿಡುವುಗಳಲ್ಲಿ ಸಂಯೋಜಿಸಿ ಬಡ್ಡಿಯ ಜೊತೆಗೆ ಅವಧಿ ತುಂಬಿದ ಮೇಲೆ ಸಂದಾಯ ಮಾಡಲಾಗುವುದು. ಎರಡನೆಯ ಸಂದರ್ಭದಲ್ಲಿ ಬಾಂಡುಗಳ ಅವಧಿ ತುಂಬಿದಾಗಿನ ಮೌಲ್ಯ ಪ್ರತಿ 1000 ರೂಗಳಿಗೆ (ನಾಮ ಮಾತ್ರ) ರೂ 1601 (ಅಸಲು ಮತ್ತು ಬಡ್ಡಿಯಾಗಿ) ಆಗಿರುತ್ತದೆ. ಸಂಚಿತವಲ್ಲದ ಬಾಂಡುಗಳಿಗೆ ಆಯ್ಕೆ ಮಾಡಿಕೊಂಡ ಧಾರಕರಿಗೆ ಬಡ್ಡಿಯನ್ನು, ಮೇಲಿನ ಪ್ಯಾರಾ 7ರ ಅನ್ವಯ ನೀಡಿದ ದಿನಾಂಕದಿಂದ ಸಂದರ್ಭಾನುಸಾರ ಜುಲೈ 31ರವರೆಗೆ/ ಜನವರಿ 31ರವರೆಗೆ ಮತ್ತು ಆ ತರುವಾಯ 31ನೇ ಜುಲೈ/ಜನವರಿ 31 ಕ್ಕೆ ಅಂತ್ಯವಾದ ಅವಧಿಗೆ ಅರ್ಧವರ್ಷಕ್ಕೊಮ್ಮೆ ಆಗಸ್ಟ್ 1/ಫೆಬ್ರವರಿ 1 ರಂದು ಸಂದಾಯ ಮಾಡಲಾಗುವುದು. "

ಬಾಂಡ್ಸ್ ಲೆಡ್ಜರ್ ಅಕೌಂಟ್" ರೂಪದಲ್ಲಿನ ಬಾಂಡುಗಳ ಮೇಲೆ ಬಡ್ಡಿಯನ್ನು ಹೂಡಿಕೆದಾರನು/ಧಾರಕನು ಮಾಡಿಕೊಂಡ ಆಯ್ಕೆಯಂತೆ **ಚೆಕ್/ವಾರಂಟ್ ಮೂಲಕ ಅಥವಾ ಧಾರಕನ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಇಸಿಎಸ್ ಮುಖಾಂತರ ಸಂದಾಯ ಮಾಡಲಾಗುವುದು.**

ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ
ಸಹಿ/–
(ಡಿ. ಸ್ವರೂಪ್)
ಅಪರ ಕಾರ್ಯದರ್ಶಿ (ಆಯವ್ಯಯ)